OS. No.66/2016
PW-1

**<u>ಸಾಕ್ಷಿಗೆ ದಿನಾಂಕ 19-01-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ VRK ವಕೀಲರಿಂದ</u>**

ನನ್ನ ಗಂಡನ ಹೆಸರು ಶರಣಪ್ಪ ಆಗಿರುತ್ತದೆ. ನಾನು ನನ್ನ ತಂದೆ ತಾಯಿಯ ಮನೆಯಲ್ಲಿ ಮದುವೆಯಾದ ನಂತರ ವಾಸವಾಗಿರುತ್ತೇನೆ. ನನಗೆ ಒಬ್ಬ ಮಗ ಇರುತ್ತಾನೆ. ನಾವೆಲ್ಲರೂ ಬನ್ನಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇವೆ. ನನ್ನ ಅಜ್ಜನ ಹೆಸರು ಮಲ್ಲಣ್ಣಗೌಡ ಆಗಿರುತ್ತದೆ. ನನ್ನ ಮುತ್ತಜ್ಜನ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜ ಮಲ್ಲಣ್ಣಗೌಡ ಇವನಿಗೆ ಮೂರು ಜನ ಅಣ್ಣತಮ್ಮಂದಿರು ಇದ್ದರು. ಸದರಿ ಮಲ್ಲಣ್ಣಗೌಡನ ಅಣ್ಣ ತಮ್ಮಂದಿರ ಹೆಸರು ನನಗೆ ಹೇಳಲು ಆಗುವುದಿಲ್ಲ.

ನನ್ನ ಅಜ್ಜ ಮಲ್ಲಣ್ಣಗೌಡನ ತಂದೆಯ ಹೆಸರು ಗುರುಸಿದ್ಧಪ್ಪ ಎಂದರೆ ಸರಿಯಲ್ಲ. ಸದರಿ ಮಲ್ಲಣ್ಣಗೌಡನ ಅಣ್ಣ ತಮ್ಮಂದಿರ ಹೆಸರು ದೊಡ್ಡ ಮಲ್ಲಪ್ಪ , ದೊಡ್ಡಪ್ಪ ಗೌಡ ಹಾಗೂ ಭೀಮಣ್ಣಗೌಡ ಎಂದರೆ ನನಗೆ ಗೊತ್ತಿರುವುದಿಲ್ಲ.

ದೊಡ್ಡ ಮಲ್ಲಪ್ಪನ ಮಗನ ಹೆಸರು ಸದಾಶಿವಪ್ಪ ಎಂದರೆ ಸರಿ. ದೊಡ್ಡಪ್ಪಗೌಡ ಈತನಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೀಮಣ್ಣಗೌಡ ಈತನಿಗೆ ರಾಚಮ್ಮ ಎಂಬ ಮಗಳು ಇರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸದಾಶಿವಪ್ಪಗೌಡ ಈತನ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಸದಾಶಿವಪ್ಪ ಈತನು ಮದುವೆ ಆಗಿರಲಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.